ಮೋಸವಾಗುತ್ತಿದೆ. ಅವರು ಇದ್ದಾಗ ಅವರು ಅಭಿವೃದ್ಧಿ ಮಾಡಿಕೊಂಡರು. ಈಗ ಇವರು ಬಂದಾಗ, ಅಲ್ಲಿ ಅವರಿದ್ದಾರೆ ಎಂದು ಇವರು ಅಭಿವೃದ್ಧಿಯನ್ನೇ ಮಾಡುವುದಕ್ಕೆ ಹೋಗುತ್ತಿಲ್ಲ. ನಮ್ಮ ತಾಲ್ಲೂಕಿಗೆ ಅನ್ಯಾಯವಾಗಿರುವುದರ ಬಗ್ಗೆ ನಾವು ಹೇಳುತ್ತಿದ್ದೇವೆ. ನಮ್ಮ ತಾಲ್ಲೂಕಿಗೆ ಹಣ ಬಿಡುಗಡೆಯಾಗಿಲ್ಲ. ಅಂದರೆ, ಇವರಿಗೆ ಹಾಸನ ಜಿಲ್ಲೆಯ ಬಗ್ಗೆ ಕಾಳಜಿ ಇಲ್ಲ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಮುಂದಿನ ಸಲ ಕೊಡುತ್ತೇನೆ ಎಂದು ಹೇಳಬಾರದು, ಮಂತ್ರಿಗಳು ದಯವಿಟ್ಟು announce ಮಾಡಬೇಕು. ತಾವು ಎಲ್ಲರನ್ನೂ ಸಮಾನತೆಯಿಂದ ನೋಡಿಕೊಳ್ಳಬೇಕು.

ಶ್ರೀ ಹೆಚ್.ಡಿ.ರೇವಣ್ಣ :– ವಿಶೇಷವಾಗಿ ನಮ್ಮ ಊರಿನದ್ದೂ ಸೇರಿಸಿ ಅವರಿಗೆ ಕೊಡಲಿ ಎಂದು ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ.

ಶ್ರೀ ಎಸ್.ಶಿವಣ್ಣ :– ಅವರು ಮಂತ್ರಿಗಳಾಗಿದ್ದಾಗ ಅಲ್ಲಿಗೆ ಏನೇನು ಬೇಕೋ ಅದೆಲ್ಲವನ್ನೂ ಮಾಡಿಕೊಂಡಿದ್ದಾರೆ. ಈಗ ಅಲ್ಲಿ ಏನೂ ಉಳಿದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ :– ಅದಕ್ಕಾಗಿಯೇ ಈಗ ನಮ್ಮದನ್ನೂ ಸೇರಿಸಿ ಅವರಿಗೆ ಕೊಡಿ ಎಂದು ಹೇಳುತ್ತಿರುವುದು.

ಶ್ರೀ ಬಾಲಚಂದ್ರ ಜಾರಕಿಹೊಳಿ :– SFC Special Grant ನಲ್ಲಿ ನಮಗೆ ಕಡಿಮೆ ಬಂತು, ಅವರಿಗೆ ಹೆಚ್ಚು ಬಂತು ಎನ್ನುವ ವ್ಯತ್ಯಾಸ ಬೇಡ ಎಂದು ಹೇಳಿ ಈ ಸಲ ಬಜೆಟ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ನಗರಸಭೆಗೆ 15 ಕೋಟಿ, ಪುರಸಭೆಗೆ 5 ಕೋಟಿ, ಪಟ್ಟಣ ಪಂಚಾಯಿತಿಗಳಿಗೆ 2 ಕೋಟಿ ರೂಪಾಯಿಗಳನ್ನು ಈಗಾಗಲೇ allocation ಮಾಡಿಬಿಟ್ಟಿದ್ದಾರೆ. ನಮ್ಮ ಜಿಲ್ಲೆಗೆ ಬಂದಿಲ್ಲ ಅಥವಾ ಕಡಿಮೆಯಾಯಿತು ಎಂದು ಹೇಳುವುದು ಬೇಡ ಎಂದು ಹೇಳಿ ಸಮಾನವಾಗಿ ಹಂಚಿದ್ದಾರೆ. ಮುಂದಿನ ದಿನಗಳಲ್ಲಿ ಪಕ್ಷಾತೀತವಾಗಿ ಎಲ್ಲರಿಗೂ ದುಡ್ಡು ಬರುತ್ತದೆ. ಯಾರಿಗೂ ಯಾವುದೇ ರೀತಿಯ ವ್ಯತ್ಯಾಸವಿರುವುದಿಲ್ಲ. ದಯಮಾಡಿ ಎಲ್ಲರೂ ಸಹಕರಿಸಬೇಕು.

<u>ಶಿರಾನಗರ ಸಭೆಗೆ ಬಿಡುಗಡೆಯಾದ ಅನುದಾನದ ಬಗ್ಗೆ.</u>

(253) ಶ್ರೀ ಜಯಚಂದ್ರ.ಟಿ.ಬಿ (ಶಿರಾ)

ಶ್ರೀ ಬಾಲಚಂದ್ರ ಜಾರಕಿಹೊಳಿ.(ಮಾನ್ಯ ಪೌರಾಡಳಿತ ಸಚಿವರು)

ಅ) ಶಿರಾ ನಗರಸಭೆಗೆ 2004–05 ರಿಂದ 2008–09ರವರೆಗೆ ಯೋಜನೆವಾರು ಬಿಡುಗಡೆಯಾದ ಅನುದಾನವೆಷ್ಟು; ಬಳಕೆಯಾಗಿರುವ ಅನುದಾನವೆಷ್ಟು (ಸಮಗ್ರ ಮಾಹಿತಿಯನ್ನು ನೀಡುವುದು).

ಶಿರಾ ನಗರಸಭೆಗೆ ಈ ಕೆಳಕಂಡಂತೆ ಅನುದಾನ ಬಿಡುಗಡೆಗೊಳಿಸಿದೆ (1)12ನೇ ಹಣಕಾಸು

(ರೂ.ಲಕ್ಷಗಳಲ್ಲಿ)

ವರ್ಷ	04–05	05–06	06–07	07–08	08–09

ಬಿಡುಗಡೆಯಾದ ಒಟ್ಟು ಅನುದಾನ	–	49.94	9.24	13.12	6.50
ಬಳಕೆಯಾದ ಅನುದಾನ	–	–	4.62	2.03	–

(2) ರಾಜ್ಯ ಹಣಕಾಸು ಯೋಜನೆ

ವರ್ಷ	04–05	05–06	06–07	07–08	08–09
ಬಿಡುಗಡೆಯಾದ ಮುಕ್ತ ನಿಧಿ (ವಿಶೇಷ)	3.05	107.34 4.81	104.93 50.00	314.23 75.00	235.37 25.00
ಬಳಕೆಯಾದ ಅನುದಾನ	3.50	112.15	124.35	133.19	5.00

(3) ಎಸ್‌ಜೆಎಸ್‌ಆರ್‌ವೈ

ವರ್ಷ	04–05	05–06	06–07	07–08	08–09
ಬಿಡುಗಡೆಯಾದ ಮುಕ್ತ ನಿಧಿ (ವಿಶೇಷ)	51.56	7.84	10.30	26.94	17.82
ಬಳಕೆಯಾದ ಅನುದಾನ	46.02	7.25	9.78	10.34	18.55

(4)ಯುಐಡಿಎಸ್‌ಎಸ್‌ಎಂಟಿ ಯೋಜನೆ ಶಿರಾ ಪಟ್ಟಣಕ್ಕೆ ಇರುವುದಿಲ್ಲ.

(5)ಐಡಿಎಸ್‌ಎಂಟಿ ಯೋಜನೆಗೆ 1995–96 ರಿಂದ 2001–02 ರವರೆಗೆ ಒಟ್ಟು ರೂ.150.00 ಲಕ್ಷ ಬಿಡುಗಡೆಗೊಳಿಸಿದೆ. ಇದರಲ್ಲಿ ಇದುವರೆವಿಗೂ ರೂ.143.27 ಲಕ್ಷಗಳು ವೆಚ್ಚವಾಗಿರುತ್ತದೆ.

ಆ) ಅನುದಾನ ಸರಿಯಾಗಿ ಬಳಕೆಯಾಗದೆ ಇರುವುದು ಮತ್ತು ಕಾಮಗಾರಿಗಳ ಗುಣಮಟ್ಟ ಕಾಪಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತಪ್ಪಿತಸ್ಥ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ?

–ಇಲ್ಲ–

–ಉದ್ಭವಿಸುವುದಿಲ್ಲ–

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಅಧ್ಯಕ್ಷರೆ, 2004–08ರ ಮಧ್ಯದಲ್ಲಿ ಶಿರಾ ನಗರಸಭೆಗೆ ಅನುದಾನ ಬಿಡುಗಡೆಯಾಗಿದ್ದು ಎಷ್ಟು, ಖರ್ಚಾಗಿದ್ದು ಎಷ್ಟು ಉಳಿಕೆಯಾಗಿದ್ದು ಎಷ್ಟು ಎನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೆ. ನೀವು ಕೊಟ್ಟಿರುವ ಅಂಕಿಅಂಶಗಳಲ್ಲಿ ಎಷ್ಟು ಹಣ ಉಳಿದಿದೆ ಎನ್ನುವುದು ಗೊತ್ತಾಗುತ್ತಿಲ್ಲ. ಈ

ನಗರಸಭೆಗಳಿಗೆ ಮೂಲಭೂತವಾಗಿ ಯಾವ ಯಾವ ಯೋಜನೆಗಳಲ್ಲಿ ಈ ಹಣ ಬರುತ್ತವೆ, including SFC grant, muncipal funds ಇವೆಲ್ಲಾ ಸೇರಿದಂತೆ ಯಾವ ಯಾವ ಯೋಜನೆಯಲ್ಲಿ ಹಣ ಬರುತ್ತದೆ ಎನ್ನುವುದನ್ನು ಹೇಳಬೇಕು, ಏಕೆಂದರೆ, ಇದರಲ್ಲಿ ಸಂಪೂರ್ಣವಾದ ವಿವರಗಳು ಇಲ್ಲ.

ಶ್ರೀ ಬಾಲಚಂದ್ರ ಜಾರಕಿಹೊಳಿ :– ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ನಗರಸಭೆಗಳಿಗೆ ಯಾವ ಯಾವ ಯೋಜನೆಯಲ್ಲಿ ದುಡ್ಡು ಬರುತ್ತದೆ ಎಂದು ಕೇಳಿದ್ದಾರೆ. SFC grant, 12ನೇ ಹಣಕಾಸು ಯೋಜನೆ, SJRY (ಸುವರ್ಣ ಜಯಂತಿ ರೋಜ್‌ಗಾರ್ ಯೋಜನೆ), ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆ, ಇಂಥ ಮೂರ್ನಾಲ್ಕು ಯೋಜನೆಗಳಿಂದ ನಗರಸಭೆಗಳಿಗೆ ದುಡ್ಡು ಬರುತ್ತದೆ. ಮುಖ್ಯವಾಗಿ, SFC grantನ ಮುಕ್ತನಿಧಿಯಲ್ಲಿ ಹೆಚ್ಚಿನ ಅನುದಾನ ಬರುತ್ತದೆ. ಅದನ್ನು development ವಿಚಾರಕ್ಕೆ ಖರ್ಚು ಮಾಡಬೇಕು ಎನ್ನುವುದಿದೆ. ತಮ್ಮಲ್ಲಿಯೂ ದುಡ್ಡನ್ನು ಬಿಡುಗಡೆ ಮಾಡಿದ್ದೇವೆ, ಖರ್ಚಿನ ಪ್ರಮಾಣ ಕಡಿಮೆ ಇದೆ, ಅದನ್ನು speed ಮಾಡಬೇಕು ಎಂದು ನಾವು ಈಗಾಗಲೇ ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ meeting ಮಾಡಿ, ಆದಷ್ಟು ಮಾರ್ಚ್ 31ರೋಳಗೆ ದುಡ್ಡನ್ನು ಖರ್ಚು ಮಾಡಬೇಕು ಎಂದು ನಾವು ಆದೇಶವನ್ನು ಮಾಡಿದ್ದೇವೆ.

ಶ್ರೀ ಟಿ.ಬಿ.ಜಯಚಂದ್ರ :– ಎಲ್ಲಾ funds ಸೇರಿ ಉಳಿಕೆಯಾಗಿರುವ ಹಣ ಎಷ್ಟು ಎಂದು ಕೇಳಿದೆ. ಅದಕ್ಕೆ ನೀವು ಉತ್ತರ ಹೇಳಲಿಲ್ಲ. ನನ್ನಲ್ಲಿರುವ ಅಂಕಿಅಂಶಗಳ ಪ್ರಕಾರ ನಾಲ್ಕು ವರ್ಷಗಳಿಂದ ಇಲ್ಲಿಯವರೆಗೂ ಯಾವ ಹಣವೂ ಖರ್ಚಾಗಿಲ್ಲ. Tender ಆಗಿ ಕೆಲಸ ಮಂಜೂರಾಗಿರತಕ್ಕಂಥವೂ ಕೂಡ work complete ಆಗಿಲ್ಲ. ಏಕೆಂದರೆ ನಮ್ಮಲ್ಲಿ ಅಧಿಕಾರಿಗಳಿಲ್ಲ. ಒಬ್ಬರೂ ಕಛೇರಿಗೆ ಬರುವುದಿಲ್ಲ. ಇಲ್ಲಿ ಅವ್ಯವಹಾರ, ಒಳಜಗಳಗಳಿರುವುದರಿಂದ ಯಾವುದೇ ಹಣ ಖರ್ಚಾಗುತ್ತಿಲ್ಲ. ಅದಕ್ಕಾಗಿ ತಾವು ಯಾರಾದರೊಬ್ಬ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿ ಸಂಪೂರ್ಣವಾಗಿ enquiry ಮಾಡಿಸಿದರೆ ಇದನ್ನು ಒಂದು ಸುವ್ಯವಸ್ಥೆಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಸಾಧ್ಯವಿಲ್ಲ. ಆದ್ದರಿಂದ, ಅದನ್ನು ಮಾಡುವಿರಾ ಎಂದು ಕೇಳುತ್ತಿದ್ದೇನೆ.

ಶ್ರೀ ಬಾಲಚಂದ್ರ ಜಾರಕಿಹೊಳಿ:– ಹಿರಿಯ ಸದಸ್ಯರಾದ ಮಾನ್ಯ ಜಯಚಂದ್ರರವರು ನಾಲ್ಕು ವರ್ಷಗಳಿಂದ ಯಾವುದೇ ಅನುದಾನ ಸರಿಯಾಗಿ ಬಳಕೆಯಾಗಿಲ್ಲ, ಖರ್ಚಾಗಿಲ್ಲ ಎನ್ನುವುದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ಸತ್ಯಾಂಶ ಏನಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ನಾವು ನಮ್ಮ ಇಲಾಖೆಯ ಒಬ್ಬ joint Directorರವರನ್ನು ಅಲ್ಲಿಗೆ depute ಮಾಡುತ್ತೇವೆ. ಅವರು ಶಿರಾ ನಗರಸಭೆಗೆ ಹೋಗಿ ಅಲ್ಲಿಂದ ಸಂಪೂರ್ಣವಾದ ವರದಿಯನ್ನು ತೆಗೆದುಕೊಂಡು ಬರಲು ತಿಳಿಸುತ್ತೇವೆ. Director of Municipal Administration

ರವರಿಗೆ ವರದಿ ಒಪ್ಪಿಸಿ ಎಂದು ಹೇಳುತ್ತೇವೆ. ಸರ್ಕಾರವು ಆ ವರದಿಯನ್ನು ತರಿಸಿ, ತಾವು ಹೇಳಿದ ರೀತಿಯಲ್ಲಿ ಅಲ್ಲಿ ಏನಾದರೂ ವ್ಯತ್ಯಾಸವಾಗಿದ್ದರೆ ಸರ್ಕಾರ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಮಾನ್ಯ ಸಭಾಧ್ಯಕ್ಷರ ಮುಖಾಂತರ ತಮ್ಮ ಗಮನಕ್ಕೆ ಬರಲು ಬಯಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ :– ಅಲ್ಲಿ ಬಹಳ ಹುದ್ದೆಗಳು ಖಾಲಿ ಇವೆ. ಇಂಜಿನಿಯರುಗಳು ಇಲ್ಲ, tax collect ಮಾಡತಕ್ಕಂಥವರು ಇಲ್ಲ, ನಮ್ಮಲ್ಲಿ ಸುಮಾರು 80 ರಿಂದ 90 ಲಕ್ಷರೂಪಾಯಿಗಳವರೆಗೆ tax arrears ಬರಬೇಕಾದುದು ಇದೆ. ಅದನ್ನು collect ಮಾಡುವವರು ಒಬ್ಬರೂ ಇಲ್ಲ. ಹಾಗಾಗಿ, ಅಲ್ಲಿ ಖಾಲಿ ಇರತಕ್ಕಂಥ vacancies fill up ಮಾಡಬೇಕು ಮತ್ತು ಅಲ್ಲಿರತಕ್ಕಂಥ ಅದಕ್ಷರನ್ನು ಹೊರಗಡೆ ಹಾಕಿ, ಸ್ವಲ್ಪ ಮಟ್ಟಿಗಾದರೂ ಅಲ್ಲಿಗೆ ದಕ್ಷರನ್ನು ತರತಕ್ಕಂಥ ಕೆಲಸ ಮಾಡಿದರೆ ಖಂಡಿತವಾಗಿಯೂ ಪರಿಸ್ಥಿತಿ ಸುಧಾರಣೆಯಾಗುತ್ತದೆ. ಆ ಕೆಲಸವನ್ನು ಮಾಡಬೇಕು.

ಶ್ರೀ ಬಾಲಚಂದ್ರ ಲ ಜಾರಕಿಹೊಳಿ:– ಪೌರಾಡಳಿತ ಇಲಾಖೆಯಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಇರುವುದರಿಂದ ಅನುದಾನ ಖರ್ಚು ಮಾಡಲು. tax collect ಮಾಡುವುದರಲ್ಲಿ ತೊಂದರೆಯಾಗುತ್ತಿದೆ. ತಮ್ಮ ಮುಖಾಂತರ ಎಲ್ಲ ಸದಸ್ಯರ ಗಮನಕ್ಕೆ ತರಲು ಬಯಸುತ್ತೇನೆ, 834 ಹುದ್ದೆಗಳಿಗೆ karnataka Examination Authority ಮುಖಾಂತರ examine ಮಾಡಿ ಮೂರು ತಿಂಗಳಲ್ಲಿ selection ಮಾಡಿಕೊಳ್ಳುತ್ತೇವೆ. ಅದರ ಜೊತೆಗೆ, 34 ಜನ Chief Officerಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ selection ಮಾಡಿಕೊಳ್ಳುತ್ತೇವೆ. ಆದರೂ ಸಹ, ಸಾಕಷ್ಟು ಹುದ್ದೆಗಳು ಖಾಲಿ ಇರುವುದರಿಂದ ಕೆಲವೊಂದು out source ಮಾಡಿ, ಮುಂದಿನ ದಿನಗಳಲ್ಲಿ ಕಾರ್ಯ ನಿರ್ವಹಿಸಲು ತೊಂದರೆಯಾಗದ ಹಾಗೆ ಸರ್ಕಾರ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತದೆ ಎಂದು ತಮ್ಮ ಮುಖಾಂತರ ಭರವಸೆ ಕೊಡುತ್ತೇನೆ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ :– ಮಾನ್ಯ ಅಧ್ಯಕ್ಷರೇ, ಸಚಿವರಲ್ಲಿ ಒಂದು ಕ್ಲಾರಿಫಿಕೇಷನ್ ಕೇಳಲು ಬಯಸುತ್ತೇನೆ. ಈ ವರ್ಷದಿಂದ ಪುರಸಭೆಗೆ, ಪಟ್ಟಣ ಪಂಚಾಯಿತಿ ಕಾರ್ಪೊರೇಷನ್ನಿಗೆ ತಾವು SFC grant ಕೊಡುತ್ತೇವೆ ಎಂದು ಹೇಳಿದಿರಿ. ತಾರತಮ್ಯವಾಗದೆ ರೀತಿಯಲ್ಲಿ ನೋಡಿಕೊಳ್ಳುತ್ತೇವೆ ಎಂದು ಹೇಳಿದಿರಿ. SFC grant ನಲ್ಲಿ ಎರಡು ರೀತಿ ಇವೆ. ಒಂದು regular ಆಗಿ ಬರುವಂಥಾದ್ದು, ಮತ್ತೊಂದು ವಿಶೇಷ ಅನುದಾನ. ತಾವು ಯಾವುದನ್ನು ಕೊಡುತ್ತೀರಿ ಎನ್ನುವುದನ್ನು ದಯಮಾಡಿ ಹೇಳಬೇಕು. ವಿಶೇಷ ಅನುದಾನ ಎಂದು ಬೇರೆ ಬರುತ್ತದೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ತಾವು ಹಂಚಿಕೆ ಮಾಎಉತ್ತೀರಿ. Regular SFC

grant ಎಂದು ಒಂದು ಬರುತ್ತದೆ. ಅಲ್ಲಿ ರಸ್ತೆ, ಒಳಚರಂಡಿಗಳ ನಿರ್ವಹಣೆ, ಲೈಟ್ ಬಿಲ್ ತುಂಬಲಿಕ್ಕೆ ಇತ್ಯಾದಿಗಳಿಗೆಂದು ಅದು ಬರುತ್ತದೆ. ಆದ್ದರಿಂದ ನೀವು ಹೇಳಿರುವುದನ್ನು clarify ಮಾಡಬೇಕು. SFC grant ಕೊಡುತ್ತೇವೆ ಎಂದರೆ regular grant ಕೊಡುತ್ತೀರೋ ಅಥವಾ ವಿಶೇಷ ಅನುದಾನವನ್ನು ಕೊಡುತ್ತೀರೋ ಅಥವಾ ಎರಡೂ ಕೂಡಿಸಿ ಕೊಡುತ್ತೀರೋ ಎನ್ನುವ ಬಗ್ಗೆ ತಾವು ನಿಶ್ಚಿತವಾದಂಥ ಒಂದು ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಾಲಚಂದ್ರ ಲ ಜಾರಕಿಹೊಳಿ:– ಮಾನ್ಯ ಸದಸ್ಯರು ಹೇಳಿದ ಹಾಗೆ, ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಚರ್ಚೆ ಮಾಡಬೇಕಾಗುತ್ತದೆ. ತಮ್ಮನ್ನು ಪ್ರತ್ಯೇಕವಾಗಿ ನನ್ನ ಕಛೇರಿಗೆ ಕರೆಸಿ ತಮ್ಮ ಜೊತೆ ಮಾತನಾಡುತ್ತೇನೆ ಎಂದು ಮಾನ್ಯ ಸಭಾಧ್ಯಕ್ಷರ ಮುಖಾಂತರ ತಿಳಿಸುತ್ತೇನೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ :– ಇದು ಬಹಳ ಮಹತ್ವದ ಪ್ರಶ್ನೆಯಾಗಿದೆ. SFC grant ಎಂದರೆ ಅದರಲ್ಲಿ ಎರಡು ತರಹ grant ಗಳಿವೆ. Regular ಒಂದು ಬರುತ್ತದೆ. ವಿಶೇಷ ಅನುದಾನ ಒಂದು ಇದೆ. ಇದರ ಬಗ್ಗೆ ನೀವು ಹೇಳಿಕೆ ಕೊಡಬೇಕು.

ಉಪಾಧ್ಯಕ್ಷರು :– ಅವರು ಹೇಳಿದರಲ್ಲ.

ಶ್ರೀ ಬಾಲಚಂದ್ರ ಲ ಜಾರಕಿಹೊಳಿ :– ಮಾನ್ಯ ಹಿರಿಯ ಸದಸ್ಯರಾದ ಪ್ರಕಾಶ ಹುಕ್ಕೇರಿಯವರಿಗೆ ಯಾವತ್ತೂ special ಆಗಿರುತ್ತದೆ. ಅದಕ್ಕೋಸ್ಕರ ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡುತ್ತೇನೆ ಎಂದು ಹೇಳಿದ್ದೇನೆ.

ಮಂಡ್ಯ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ.

234 ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ (ಶ್ರೀರಂಗಪಟ್ಟಣ)

ಶ್ರೀ ಸಿ.ಎಂ.ಉದಾಸಿ. (ಲೋಕೋಪಯೋಗಿ ಸಚಿವರು)

ಅ) ಮಂಡ್ಯ ಜಿಲ್ಲೆಯಾದ್ಯಂತ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಂಡಿರುವ ನೂತನ ರಸ್ತೆ ಅಭಿವೃದ್ಧಿ ಕಾರ್ಯಗಳು ಎಷ್ಟು;

ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ರೂ.5337.50 ಲಕ್ಷಗಳು ವೆಚ್ಚದಲ್ಲಿ ಒಟ್ಟು 67 ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

ಆ) ಅವುಗಳಿಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು;

ಪ್ರಸಕ್ತ ಸಾಲಿಗೆ ಲೆಕ್ಕಶೀರ್ಷಿಕೆ 5054 ಓಆರ್‌ಎಫ್ ಅಡಿಯಲ್ಲಿ 54 ಕಾಮಗಾರಿಗಳಿಗೆ ರೂ.1184.50 ಲಕ್ಷಗಳು ಹಾಗೂ ಸಿಆರ್‌ಎಫ್ ಮತ್ತು ನಬಾರ್ಡ್ ಯೋಜನೆಗಳಡಿಯಲ್ಲಿ 13 ಕಾಮಗಾರಿಗಳಿಗೆ ಒಟ್ಟುರೂ.1452.50 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.

ಇ) ಶ್ರೀರಂಗಪಟ್ಟಣ ತಾಲ್ಲೂಕಿನಾದ್ಯಂತ ಕೈಗೊಂಡಿರುವ ನೂತನ ರಸ್ತೆ ಅಭಿವೃದ್ಧಿ ಕಾರ್ಯಗಳು ಯಾವುವು ಮತ್ತು ಅವುಗಳಿಗೆ ಒದಗಿಸಿರುವ ಅನುದಾನ ಎಷ್ಟು;